

# ಸ್ಟಾರ್‌ವಾರ್ ಬೇಡ: ಶಿವಣ್ಣ

‘ಒಳ್ಳೆಯತನ–ಕೆಟ್ಟತನಗಳನ್ನು ಸಂಯಮದಿಂದ ಧ್ವನಿಯ ಮೂಲಕ ಭಾವನೆಗಳ ಮೂಲಕ ವ್ಯಕ್ತಪಡಿಸುವ ಸುದೀಪ್ ರೀತಿ ಪ್ರಬುದ್ಧವಾದದ್ದು.

ಬಿಗ್‌ಬಜೆಟ್‌ನಲ್ಲಿ ನಿರ್ಮಾಣವಾದ ‘ದಿ ವಿಲನ್’ ಅ.18ಕ್ಕೆ ತೆರೆಗೆ ಬರುತ್ತಿದೆ. ಶಿವರಾಜ್‌ಕುಮಾರ್, ಸುದೀಪ್, ಆ್ಯಮಿ ಜಾಕ್ಸನ್ ತಾರಾಗಣ; ಪ್ರೇಮ್ ಅವರ ಅದ್ದೂರಿ, ಕುತೂಹಲ ಹುಟ್ಟಿಸಿರುವ ಟೀಸರ್‌ಗಳು, ಅಭಿಮಾನಿಗಳನ್ನು ಹುಚ್ಚೆಬ್ಬಿಸಿರುವ ಹಾಡುಗಳು... ಹೀಗೆ ಹಲವು ಕಾರಣಗಳಿಗೆ ‘ದಿ ವಿಲನ್’ ಚಿತ್ರದ ಸುತ್ತ ನಿರೀಕ್ಷೆಯ ಗೋಪುರ ನಿರ್ಮಾಣಗೊಂಡಿದೆ. ಶಿವಣ್ಣ, ಸುದೀಪ್ ಇಬ್ಬರಲ್ಲಿ ‘ವಿಲನ್’ ಯಾರು ಎಂಬ ಪ್ರಶ್ನೆಯೂ ಆ ನಿರೀಕ್ಷಾಗೋಪುರದ ನೆತ್ತಿಯ ಮೇಲೆ ಕತ್ತಿಯ ರೀತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಶಿವರಾಜ್‌ಕುಮಾರ್ ಅವರ ಜತೆ ನಡೆಸಿದ ಚುಟುಕು ಮಾತುಕತೆ ಇಲ್ಲಿದೆ.

**ನೀವು ನಟಿಸಿರುವುದನ್ನು ಮರೆತು ಹೇಳುವುದಾದರೆ ‘ದಿ ವಿಲನ್’ ಸಿನಿಮಾದಲ್ಲಿ ನಿಮಗಿಷ್ಟವಾದ ಸಂಗತಿ ಏನು?**

ಇದೊಂದು ಕಮರ್ಷಿಯಲ್ ಸಿನಿಮಾ. ಎಮೋಶನ್‌ಗಳು ಚಿತ್ರದಲ್ಲಿವೆ. ನನ್ನ ಅಥವಾ ಸುದೀಪ್ ಪಾತ್ರವನ್ನು ಬಿಟ್ಟು ಹೇಳುವುದಾದರೆ ತಾಂತ್ರಿಕವಾಗಿಯೂ ಬ್ರಿಲಿಯಂಟ್ ಆಗಿರುವ ಸಿನಿಮಾ ಇದು.

**ಇದೊಂದು ತುಂಬ ದೊಡ್ಡ ಬಜೆಟ್ ಸಿನಿಮಾ. ಇಂಥ ಸಿನಿಮಾಗಳು ಒಟ್ಟಾರೆ ಚಿತ್ರರಂಗದ ಬೆಳವಣಿಗೆಯ ದೃಷ್ಟಿಯಿಂದ ವಹಿಸುವ ಪಾತ್ರ ಯಾವ ಬಗೆಯದ್ದು?**

ತುಂಬ ಜನ ‘ದಿ ವಿಲನ್’ ಬಗ್ಗೆ ಮಾತನಾಡುತ್ತಿದ್ದಾರೆ. ಬಹುತಾರಾಗಣದ ಚಿತ್ರಗಳನ್ನು ಮಾಡಿದಾಗ ಸಹಜವಾಗಿಯೇ ಹೆಚ್ಚು ಜನಪ್ರಿಯವಾಗುತ್ತವೆ. ಕನ್ನಡ ಚಿತ್ರರಂಗದ ಮಾರುಕಟ್ಟೆಯ ವಿಸ್ತರಣೆಯ ದೃಷ್ಟಿಯಿಂದಲೂ ಇಂಥ ಸಿನಿಮಾಗಳು ಮುಖ್ಯ.

**ಅಭಿಮಾನಿಗಳು ಹುಟ್ಟುಹಾಕುತ್ತಿರುವ ‘ತಾರಾ ಸಮರ’ವನ್ನು ಕಡಿಮೆಗೊಳಿಸಲೂ ಇಂಥ ಸಿನಿಮಾಗಳು ಸಹಾಯಕ ಆಗಬಹುದೇ?**

ಇರಬಹುದು. ಸ್ಟಾರ್‌ವಾರ್ ಅಂತೇನಿಲ್ಲ. ಪಾಪ, ಅವರವರ ನೆಚ್ಚಿನ ನಟನ ಬಗ್ಗೆ ಮಾತನಾಡುವುದು, ಅವರನ್ನು ವಹಿಸಿಕೊಳ್ಳುವುದೆಲ್ಲ ಪ್ರೀತಿ, ಅಭಿಮಾನ ಅಷ್ಟೆ. ಆದರೆ, ಸ್ವಲ್ಪ ಸಕಾರಾತ್ಮಕವಾಗಿ ಯೋಚಿಸುವುದು ಎಲ್ಲರಿಗೂ ಒಳ್ಳೆಯದು. ಪುನೀತ್ ಇರಲಿ, ದರ್ಶನ್, ಸುದೀಪ್, ಯಶ್, ಧ್ರುವ ಯಾರ ಕುರಿತಾಗಿಯೇ ಆಗಲಿ ಅಭಿಮಾನಿಗಳು ಸಕಾರಾತ್ಮಕವಾಗಿ ಯೋಚಿಸಿದರೆ ತುಂಬ ಒಳ್ಳೆಯದು.

**ಸುದೀಪ್ ಜೊತೆ ಮೊದಲ ಬಾರಿಗೆ ನಟಿಸಿದ್ದೀರಿ. ಒಬ್ಬ ಸಹನಟನಾಗಿ ಸುದೀಪ್ ನಿಮಗೆ ಹೇಗೆ ಕಾಣಿಸಿದರು?**

ಅವರ ಜೊತೆ ಅಭಿನಯಿಸಿದ್ದು ತುಂಬಾ ಸಂತಸದ ಅನುಭವ. ನಾವಿಬ್ಬರೂ ಸಾಕಷ್ಟು ಎಂಜಾಯ್ ಮಾಡಿದೆವು. ನಮ್ಮಿಬ್ಬರ ಕಾಂಬಿನೇಷನ್ ಕೂಡ ಚೆನ್ನಾಗಿ ವರ್ಕ್ ಆಗಿದೆ. ಆತನದ್ದೇ ಒಂದು ಸ್ಟೈಲ್ ಇದೆ. ಸಿನಿಮಾ ಪಾತ್ರಕ್ಕೆ ತಕ್ಕಂತೆ ಒಳ್ಳೆಯತನ–ಕೆಟ್ಟತನಗಳನ್ನು ಸಂಯಮದಿಂದ ಧ್ವನಿಯ ಮೂಲಕ ಭಾವನೆಗಳ ಮೂಲಕ ವ್ಯಕ್ತಪಡಿಸುವ ಸುದೀಪ್ ರೀತಿ ಪ್ರಬುದ್ಧವಾದದ್ದು.

**ಪ್ರೇಮ್ ಕುರಿತು...**

ಅವರ ಕೆಲಸದಲ್ಲಿ ಒಂದು ಆಡಂಬರ ಇದೆ. ಅದು ಅವರ ಸ್ಟೈಲ್. ಸಿನಿಮಾ ಟೀಸರ್ ಬಿಡುಗಡೆ ಮಾಡುವ ರೀತಿಯೇ ಇರಬಹುದು; ಜನರಲ್ಲಿ ದೊಡ್ಡ ನಿರೀಕ್ಷೆಯನ್ನು ಹುಟ್ಟುಹಾಕುತ್ತಾರೆ. ಅವರ ಸಿನಿಮಾಗಳಲ್ಲಿ ಭಾವನೆಗಳಿಗೆ ಮಹತ್ವ ಕೊಡುತ್ತಾರೆ. ಹಾಡುಗಳನ್ನೂ ತುಂಬ ಮುತುವರ್ಜಿ ವಹಿಸಿ ಮಾಡುತ್ತಾರೆ. ಅವರಿಗಿರುವ ಸಂಗೀತಜ್ಞಾನ ಅದ್ಭುತವಾದದ್ದು.

**ಸುದೀಪ್, ಶಿವಣ್ಣ, ಪ್ರೇಮ್ ಮೂವರಿಗೂ ಪ್ರತ್ಯೇಕ ಅಭಿಮಾನಿಬಳಗ ಇದೆ. ಅವರೆಲ್ಲರಿಗೂ ‘ದಿ ವಿಲನ್’ ಸಿನಿಮಾ ಬಗ್ಗೆ ಏನನ್ನು ಹೇಳಬಯಸುತ್ತೀರಿ?**

ಇದೊಂದು ಕಮರ್ಷಿಯಲ್, ಎಂಜಾಯಬಲ್ ಸಿನಿಮಾ. ಕಥೆಯಲ್ಲಿನ ಫೀಲ್ ಅನ್ನು ಕ್ಯಾರಿ ಮಾಡಿರುವ ರೀತಿ ಚೆನ್ನಾಗಿದೆ. ಮನುಷ್ಯ ಯಾಕೆ ಕೆಟ್ಟವನಾಗುತ್ತಾನೆ, ಒಳ್ಳೆಯವನಾಗುತ್ತಾನೆ ಎನ್ನುವುದನ್ನು ಕುತೂಹಲ ಹುಟ್ಟಿಸುವ ರೀತಿ ಹೇಳುವ ಚಿತ್ರ ಇದು.

■ ಪದ್ಮನಾಭ ಭಟ್